ಬಡಪಾಯಿ ತಟ್ಟೆಗಳ ಮೇಲೆ ಕಣ್ಣು ಹಾಕುತ್ತಿದ್ದ. ಕೊಟ್ಟರೂ ಸರಿ, ಕೊಡದಿದ್ದರೂ ಸರಿ ಕಸಿದುಕೊಂಡು ತಿಂದೇ ಬಿಡುತ್ತಿದ್ದ. ರೋಪು ಹಾಕಿ, ಗದರಿಸಿ, ಭಯ ಜಡಿದು ಅಷ್ಟೋ ಇಷ್ಟೋ ಕಿತ್ತುಕೊಳ್ಳದೆ ಅವನ ಜೀವ ತಣ್ಣಗಾಗುತ್ತಿರಲಿಲ್ಲ. ಪ್ಲೇಟಿಗೆ ನೇರ ಕೈ ಹಾಕಿ ತಗೆದು ಗುಳುಂ ಮಾಡಿಬಿಡುತ್ತಿದ್ದ. ನಮ್ಮ ಕಡೆ 'ಎಷ್ಟೇ ವಿಶ್ವಾಸವಿರಲಿ ಮೀನಿನ ಬುಟ್ಟಿಗೆ ಮಾತ್ರ ಕೈ ಹಾಕಬ್ಯಾಡ' ಅನ್ನೋ ಗಾದೆ ಮಾತಿದೆ. ಬಹುಶಃ ಈ ಮಾತು ನನ್ನ ಬಕಾಸುರ ಅಣ್ಣನ ನೋಡೆ ಯಾರೋ ಕಟ್ಟಿರಬೇಕು.

ಎರಡನೇ ಇಯತ್ತೆಗೆ ನಮ್ಮತ್ತೆ ಮನೆಗೆ ದೂಡಲ್ಪಟ್ಟ ನಾನು ಕುಕ್ಕಟ ಸಾಮ್ರಾಜ್ಯದೊಳಗೆ ಸೇರಿಹೋದೆ. ಜವಾರಿ ಕಾಡಿನ ನಡುವೆಯಿದ್ದ ಅತ್ತೆ ಮನೆಯಲ್ಲಿ ಬೆಳಗ್ಗೆ ಎದ್ದು ಕೋಳಿಗಳ ಎಬ್ಬಿಸಿ ಓಡಿಸುವ ಕೆಲಸ ನನಗೆ ಕೊಟ್ಟಿದ್ದರು. ಸವಿನಿದ್ದೆ ಸುತ್ತಿಕೊಂಡಿರುವಾಗಲೇ ದರಿದ್ರ ಹುಂಜದ ಕ್ಕೊ... ಕ್ಕೋ... ಕೋ ಎಂಬ ಬೊಂಬಡ ಶುರುವಾಗುತ್ತಿತ್ತು. ಸಂಜೆ ಹೊತ್ತಿಗೆ ಟೈಮಿಗೆ ಸರಿಯಾಗಿ ಮಲಗುವ ಕೋಳಿಗಳು ಸೂರ್ಯ ಮೂಡುವ ಮೊದಲೇ ಎದ್ದು ಗುಸುಗುಸು ಗಲಾಟೆ ಎಬ್ಬಿಸುತ್ತಿದ್ದವು. ಅದರಲ್ಲೂ ಜಂಭದ ಯಜಮಾನ ಹುಂಜನಿಗೆ ಸಿಕ್ಕಾಪಟ್ಟೆ ದವಲತ್ತು. ಎಳೆ ಮರಿಗಳ ಹಿಡಿದು ಕುಕ್ಕುತ್ತಾ, ನಿಮಿಷಕ್ಕೊಮ್ಮೆ ಸೈರನ್ನಿನಂತೆ ಅರಚುತ್ತಿತ್ತು. ಅದರ ಕೂಗಿನಿಂದ ಬೆಳಗಾಗಿರಬಹುದೆಂದು ಭಾವಿಸಿ ಎದ್ದು ಹೋಗಿ ಆಕಾಶ ನೋಡಿದರೆ ಇನ್ನೂ ಬೆಳ್ಳಿಚುಕ್ಕಿ ಫಳಫಳವೆಂದು ಹೊಳೆಯುತ್ತಿತ್ತು. ಒಮ್ಮೆ ನಕ್ಷತ್ರವೇ ನನ್ನ ನೋಡಿ 'ಇನ್ನೂ ಟೈಮಾಗಿಲ್ಲಾ ಹೋಗಿ ಬಿದ್ಕೋ ಮೂದೇವಿ ಮುಂಡೇದೆ' ಎಂದು ಹೆತ್ತ ತಾಯಂತೆ ನುಡಿಯಿತು. ಆಗ ನನ್ನ ಸವಿನಿದ್ದೆ ಬರ್ಬಾದ್ ಮಾಡುವ ಹುಂಜದ ಮೇಲೆ ಸಿಕ್ಕಾಪಟ್ಟೆ ಸಿಟ್ಟು ಬರುತ್ತಿತ್ತು. ಕಡಿಮೆ ಅವಧಿಯಲ್ಲಿ ತಮ್ಮ ನಿದ್ದೆ ಮುಗಿಸುವ ಕೋಳಿಗಳು ಬದುಕಿನ ದೊಡ್ಡನಿದ್ದೆ ಬಾಕಿ ಉಳಿಸಿಕೊಂಡಿರುವ ನಮಗೆ ತೊಂದರೆ ಕೊಡುವುದು ಸರಿ ಎನಿಸುತ್ತಿರಲಿಲ್ಲ. ಇವುಗಳ ಈ ಅಡ್ನಾಡಿ ಸ್ವಭಾವ ಕಂಡೇ ಯಾರೋ ಹಿರಿಯರು 'ಅರಕಾಸಿನಷ್ಟು ಉರುಳಿ ಎದ್ರೆ; ಅದಲ್ಲವೆ ಕೋಳಿನಿದ್ದೆ' ಎಂದು ಹೇಳಿ ನಾಣ್ಣುಡಿ ಹುಟ್ಟಿಸಿರಬೇಕು.

ಬೆಳಗ್ಗೆ ಕೋಳಿಗಳ ಮನೆತಟ್ಟಿ ತಗೆಯೋದೆ ತಡ, ಪ್ರೈಮರಿ ಸ್ಕೂಲು ಬಿಟ್ಟಂತೆ ಕೋಳಿಗಳು ಉಡಾಯಿಸಿ ಅಂಗಳಕ್ಕೆ ನೆಗೆಯುತ್ತಿದ್ದವು. ಜೈಲಿಂದ ಬಿಡುಗಡೆಯಾದಷ್ಟೇ ಸಂತೋಷ ಅವುಗಳ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಬೆಳಗನ್ನು ಕಂಡಾಗ ಪ್ರಾಣಿ ಪಕ್ಷಿಗಳು ತುಂಬಾ ಸಂತೋಷ ವ್ಯಕ್ತಪಡಿಸುತ್ತವೆ. ಮನುಷ್ಯರಂತೆ ಅಸಹ್ಯವಾಗಿ ಆಕಳಿಸಿ, ಕಣ್ಣುಜ್ಜಿಕೊಂಡು ಮೈ ಮುರಿಯುತ್ತಾ ಸೋಂಬೇರಿತನ ತೋರಿಸುವುದಿಲ್ಲ. ತಮ್ಮ ರೆಕ್ಕೆಪುಕ್ಕಗಳ ಹದವಾಗಿ ಕೊಡವಿ ರಿಪೇರಿ ಮಾಡಿಕೊಂಡು, ಪುಟಾಣಿ ವ್ಯಾಯಾಮ ಮುಗಿಸಿ ಆಯ್ದು ತಿನ್ನಲು ದೌಡಾಯಿಸುತ್ತವೆ. ಹುಂಜವಂತೂ ಬೆಳ್ಳಂಬೆಳಗ್ಗೆಯೇ ಪ್ರಣಯಚೇಷ್ಟೆ ಬಯಸಿ ಹೆಂಗೋಳಿಗಳ ಹತ್ತಿರ ಹೋಗಿ ಉಗಿಸಿಕೊಂಡು ಏನೂ ಆಗಿಲ್ಲವೆನ್ನುವಂತೆ ಪೆದ್ದುಪೆದ್ದಾಗಿ ಕೂಗಿ, ನುಲಿದಾಡಿ ಸಂಭ್ರಮಿಸುತ್ತದೆ.

ಹೆತ್ತಮನೆ ಬಿಟ್ಟು ಅತ್ತೆಮನೆ ಪಂಜರ ಸೇರಿದ್ದ ನನಗೆ ದಿನಾ ಅವುಗಳ ಗೂಡಿನಿಂದ ಬಿಡುಗಡೆ ಮಾಡುವುದು ಒಂದು ವಿಮೋಚನೆಯಂತೆ ಕಾಣುತ್ತಿತ್ತು. ರೆಕ್ಕೆಗಳಿದ್ದರೆ ನಮ್ಮೂರಿಗೆ ಸುರ್‌ರಂತ ಹಾರಿಹೋಗಬಹುದಲ್ಲವೇ? ಎಂದು ಚಿಂತಿಸುತ್ತಿದ್ದೆ. 'ಮನೆಯ ಗಟ್ಟಿ ಪ್ರೀತಿಯಲಿ ಬಾಳಬೇಕಾದ ಕಿರಿ ಕಂದನ ಕರುಣೆಯಿಲ್ಲದೆ ಅಡವಿಯಲ್ಲಿ ತಂದು ಕೊಡವಿ ಹೋದ' ಅಪ್ಪನ ನೆನಸಿಕೊಂಡು ಮನಸಾರೆ ಬೈದಾಡಿಕೊಳ್ಳುತ್ತಿದ್ದೆ.

ನನಗೆ ಬಹಳ ಹಿಂಸೆಯೆಂದರೆ ಕೋಳಿಮನೆ ಪಕ್ಕದಲ್ಲೇ ಇದ್ದ ಬಾತುಕೋಳಿಗಳದ್ದು. ಅಂಡುಬಡಕ